ಊರಲ್ಲಿ ಇರಬಹುದೇ? ಅವಳು ದುಡಿಯದ ಹೊಲ, ಗದ್ದೆಗಳು ಇರಬಹುದೇ? ಊರವರ ಮನೆ ಅಂಗಳಗಳಲ್ಲಿ ಕೂತು ಆರಿಸಿದ, ಕೇರಿದ, ತೂರಿದ ನೆಲ್ಲು, ರಾಗಿ, ಜೋಳಗಳೆಷ್ಟು ಪಲ್ಲ? ಸಾರಿಸಿ, ಗುಡಿಸಿದ ಮನೆಯಂಗಳಗಳೆಷ್ಟು? ಗುಡಿಸಿ, ಗುಡ್ಡೆ ಹಾಕಿ, ಹೊತ್ತು ಸುರಿದು ಬಂದ ತಿಪ್ಪೆಗಳೆಷ್ಟು? ಅವ್ವ ನಮಗಾಗಿ ದುಡಿದು ಸವೆಯುತ್ತ ಹಾಗೇ ಉಸಿರು ಚೆಲ್ಲಿದಳಲ್ಲ ಅನ್ನಿಸಿ ನೆನಪುಗಳು ಗಾಢವಾಗುತ್ತ ಸಣ್ಣ ಮಗುವಿನಂತೆ ಅತ್ತ.

ಈಗ ಊರಿಗೆ ಹೋಗಿ, ಬಿದ್ದ ಮನೆಯ ಜಾಗದಲ್ಲಿ ಸ್ವಲ್ಪ ಹೊತ್ತು ಕೂತಿದ್ದು ಬರಬೇಕು. ಅವ್ವನ ಆತ್ಮ ಇನ್ನೂ ಅಲ್ಲೇ ಸುಳಿದಾಡುತ್ತಿರಬಹುದು. ಮಗ ಬರುತ್ತಾನೆಂದು ಕಾಯುತ್ತಿರಬಹುದು. ನೆಲಕಚ್ಚಿದ ಮನೆಯನ್ನು ಎತ್ತಿ ನಿಲ್ಲಿಸುತ್ತಾನೆಂಬ ನಿರೀಕ್ಷೆ ಇಟ್ಟುಕೊಂಡಿರಬಹುದು ಅಂತ ಯೋಚಿಸಿದ. ಖಿನ್ನತೆ ಆವರಿಸಿಬಿಟ್ಟಿತು.

★★★

ಊರಲ್ಲಿ ಬಸ್ಸಿಳಿದಾಗ ಇಳಿ ಸಂಜೆ. ಅವೇ ಮಾಳಿಗೆ ಮನೆಗಳು, ಸೋಗೆ ಛಾವಣಿಯ ಒಪ್ಪಾರಗಳು. ಕೆಲವು ಜೀರ್ಣವಾಗಿವೆ. ಮನೆಗಳ ಹಾಗೆ ಊರ ಜನರೂ. ಯಾರಾದರೂ ಗುರುತಿಸಬಹುದೇ ಅಂತ ಅತ್ತಿತ್ತ ಕಣ್ಣು ಹಾಯಿಸಿದ. ನೀನು ತಾಯಮ್ಮನ ಮಗನಲ್ವೇ ಅಂತ ಯಾರಾದರೂ ಕೇಳಬಹುದು. ಎಷ್ಟು ದೊಡ್ಡವನಾಗಿದ್ದೀಯಪ್ಪ, ನಿಮ್ಮಮ್ಮ ಮಾಡಿದ ಪುಣ್ಯ. ಒಳಗೆ ಬಾ ಅಂತ ಕರೆಯಬಹುದು ಅಂತ ಯೋಚಿಸುತ್ತ ಕೇರಿಯ ಕಡೆಗೆ ಹೆಜ್ಜೆ ಹಾಕಿದ.

'ನೀನು ತಾಯಮ್ಮನ ಮಗ ರಾಮಣ್ಣನಲ್ವೆ?' ದೊಡ್ಡಮನೆಯ ಅಂಗಳದಲ್ಲಿ ಕೂತು ಕತ್ತಾಳೆಮಟ್ಟೆ ಬಡಿಯುತ್ತಿದ್ದ ರಂಗಜ್ಜ ಕಣ್ಣ ಮೇಲೆ ಒಂದು ಕೈ ಅಡ್ಡ ಹಿಡಿದು ಬೆಳಕಿಗೆ ದೃಷ್ಟಿ ಹೊಂದಿಸಿಕೊಳ್ಳುತ್ತ ಗುರುತಿಸಿ ಕೇಳಿಯೇಬಿಟ್ಟ! ಇದೇ ಮನೆಯಲ್ಲಿ ರಂಗನಾಗಿ ಸಂಬಳಕ್ಕೆ ಸೇರಿ ರಂಗಪ್ಪನಾಗಿ ದುಡಿದು ಹಣ್ಣಾಗಿ ಈಗ ರಂಗಜ್ಜನಾಗಿದ್ದ. 'ಈಗ ಎಲ್ಲಿದ್ದೀಯಪ್ಪ? ನಿಮ್ಮವ್ವ ಸತ್ತ ಮೇಲೆ ನಿಮ್ಮಪ್ಪ, ನಿಮ್ಮಣ್ಣನ್ನ ನಿನ್ನ ಮಾವಂದಿರು ಕರಕೊಂಡು ಹೋದರಂತೆ. ನೀನೂ ಊರ ಕಡೆಗೆ ಬರಲಿಲ್ಲ. ಈಗ ಊರು ನೆನಪಿಗೆ ಬಂತಾ' ಅಂತ ರಂಗಜ್ಜ ಕೇಳಿದ.

'ಇಲ್ಲಜ್ಜ, ಓದೋದು ಮುಗೀತು. ಕೆಲಸ ಸಿಕ್ಕಿದೆ. ಸೇರಿಕೊಳ್ಳೋ ಮೊದಲು ನಿಮ್ಮನ್ನೆಲ್ಲ ನೋಡಿ ಹೋಗನ ಅಂತ ಬಂದೆ. ಊರನ್ನು ಮರೆಯಕಾಗುತ್ತ' ಅನ್ನುತ್ತ ರಂಗಜ್ಜನ ಮುಖ ನೋಡಿದ... 'ನಿಮ್ಮನೆ ಮಳೆಗೆ ಬಿದ್ದು ಹೋಯ್ತಪ್ಪ' ಅಂತ ರಂಗಜ್ಜ ವಿಷಾದದಿಂದ ಹೇಳಿ ತನ್ನ ಕೆಲಸ ಮುಂದುವರಿಸಿದ...

ನೆಲಕಚ್ಚಿರುವ ಮನೆಯ ಅವಶೇಷಗಳನ್ನು ನೋಡುತ್ತ ಸ್ವಲ್ಪ ಹೊತ್ತು ಸುಮ್ಮನೆ ನಿಂತುಬಿಟ್ಟ! ಅವ್ವ ಬದುಕಿದ್ದಾಗ ಈ ಮನೆಗೆ, ಅಂಗಳಕ್ಕೆ ಜೀವ ಇತ್ತು. ಮಳೆ, ಗಾಳಿ, ಬಿಸಿಲಿಂದ ನಮ್ಮನ್ನೆಲ್ಲ ಕಾಪಾಡಿದ ಮನೆ. ಈಗ ಅದರ ಕುರುಹುಗಳಷ್ಟೇ ಉಳಿದಿವೆ. ಅಪ್ಪ, ಊರಿಂದ ಹೋಗೊ ಮೊದಲು ಮನೆಯ ಜವಾಬ್ದಾರಿಯನ್ನು ಯಾರಿಗಾದರೂ ವಹಿಸಿದ್ದರೆ ಅದು ಬೀಳುತ್ತಿರಲಿಲ್ಲ ಅನ್ನಿಸಿತು.

ಹೆಂಚಿನ ಮಾಡಿನ ಈ ಮನೆ ಕಟ್ಟಲು ಮಾಡಿದ ಸಾಲಕ್ಕೆ ಅಪ್ಪ, ಅಣ್ಣನನ್ನು ಜೀತಕ್ಕೆ ಇರಿಸಿದ್ದ. ಅಣ್ಣ ಎಷ್ಟೋ ವರ್ಷ ಯಾರದೋ ಮನೆಯಲ್ಲಿ ಜೀತ ಮಾಡಿದ. ಸಾಲ ಮುಟ್ಟಿಸಿ ಅವನನ್ನು ಬಿಡಿಸಿಕೊಳ್ಳಲು ಅಪ್ಪನಿಗೆ ಆಗಲೇ ಇಲ್ಲ. ಅವ್ವ, ಅಪ್ಪ ದುಡಿದದ್ದೆಲ್ಲ ಹೊಟ್ಟೆ ಬಟ್ಟೆಗೇ ಸಾಲಲಿಲ್ಲ. ಒಂದಲ್ಲ ಒಂದು ದಿನ ನಮ್ಮ ಕಷ್ಟಗಳೆಲ್ಲ ಕೊನೆಯಾಗ್ತವೆ ಅಂತ ಅವ್ವ ಕನಸು ಕಂಡಿದ್ದಳು. ಅವಳ ಕನಸು ಅವಳು ಬದುಕಿರೋವರೆಗೆ ನಿಜವಾಗಲಿಲ್ಲ. ಕೇರಿಯ ಜನ ಬಂದು ಮಾತಾಡಿಸಿದರು. ಮನೆಗೆ ಬಾ, ಊಟ ಮಾಡು ಅಂತ ಪ್ರೀತಿಯಿಂದ ಕರೆದರು. ನೀವೆಲ್ಲ ಹೋಗಿ ಸ್ವಲ್ಪ ಹೊತ್ತು ಇಲ್ಲಿ ಕೂತಿದ್ದು ಬರ್ತಿನಿ ಅಂದ. ಮಬ್ಬು ಬೆಳಕಿನಲ್ಲೇ ಮನೆಯ ಅಂಗಳ, ಹಿತ್ತಲಲ್ಲಿ ಓಡಾಡಿದ. ಚುನಾವಣೆಗೆ ನಿಂತವನೊಬ್ಬ ತನ್ನ ಪಕ್ಷದ ಗುರುತು ಅಂತ ಕೊಟ್ಟಿದ್ದ ತೆಂಗಿನ ಸಸಿಗಳನ್ನು ಅವ್ವ ಹಿತ್ತಲಲ್ಲಿ ನೆಟ್ಟು ಸಾಕಿದ್ದಳು. ಅವೆರಡೂ ಈಗ